ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಮಾರಾಟ ಮಳಿಗೆಗಳ ಬಗ್ಗೆ

೧೩೫೦. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಕೈಗಾರಿಕಾ ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಮಾರಾಟ ಮಳಿಗೆಗಳನ್ನು ನಿರ್ವಹಿಸುತ್ತಿದೆ ?

ಆ) ೧೯೮೯–೯೦ನೇ ಸಾಲಿನಲ್ಲಿ ಈ ಮಳಿಗೆಗಳಲ್ಲಿ ಆದ ಒಟ್ಟು ವ್ಯಾಪಾರದ ವೊತ್ತ ಎಷ್ಟು ? ಮತ್ತು ನೌಕರ ವರ್ಗಕ್ಕೆ ಸಂಬಳ ಸಾರಿಗೆ ಸೇರಿದಂತೆ ಆದ ಒಟ್ಟು ವೆಚ್ಚ ಎಷ್ಟು ?

ಇ) ಬೆಂಗಳೂರು ನಗರದ ರೈಲು ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಮಾರಾಟ ಮಳಿಗೆಗಳು ಇವೆಯೇ ?

ಈ) ಇಲ್ಲದೇ ಹೋದಲ್ಲಿ ಅಂತಹ ಮಾರಾಟ ಮಳಿಗೆಗಳನ್ನು ಈ ಸ್ಥಳಗಳಲ್ಲಿ ಪ್ರಾರಂಭಿಸುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ, ಇಂಧನ ಹಾಗೂ ವಕ್ಫ್ ಸಚಿವರು).—

ಅ) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಬೆಂಗಳೂರು ನಗರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಮಾರಾಟ ಮಳಿಗೆಗಳನ್ನು ನಿರ್ವಹಿಸುತ್ತಿದೆ.

೧. ಕಾವೇರಿ, ಎಂ.ಜಿ. ರಸ್ತೆ, ಬೆಂಗಳೂರು–೧
೨. ಕಾವೇರಿ ಭವನ, ಬೆಂಗಳೂರು–೯
೩. ಬೆಂಗಳೂರು ವಿಮಾನ ನಿಲ್ದಾಣ
೪. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, ಬೆಂಗಳೂರು–೧೧.

ಆ)

ಬೆಂಗಳೂರು ನಗರದಲ್ಲಿನ ಮಾರಾಟ ಮಳಿಗೆಯ ಹೆಸರು	ಮಾರಾಟ	ಸಂಬಳ ಮತ್ತು ಇತರೆ ವೆಚ್ಚಗಳು (ರೂ. ಲಕ್ಷಗಳಲ್ಲಿ)
೧. ಕಾವೇರಿ, ಎಂ.ಜಿ. ರಸ್ತೆ	೨೫೫.೯೩	೩೨.೫೦
೨. ಕಾವೇರಿ ಭವನ, ಬೆಂಗಳೂರು	೧೮.೫೩	೪.೯೦
೩. ಬೆಂಗಳೂರು ವಿಮಾನ ನಿಲ್ದಾಣ	೨೧.೦೮	೨.೩೫
೪. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್	೧೦.೬೧	೨.೧೦

ಇ) ಇಲ್ಲ.

ಈ) ಬೆಂಗಳೂರು ಬಸ್ ನಿಲ್ದಾಣದ ಹತ್ತಿರ ಒಂದು ಮಾರಾಟ ಮಳಿಗೆಯನ್ನು ತೆರೆಯಲು ಪ್ರಯತ್ನ ಗಳನ್ನು ಮಾಡಲಾಗುತ್ತಿದೆ.

ರೇಷ್ಮೆ ಬೆಳೆಗಾರರಿಗೆ ಬೋನಸ್ ಹಣ

೯೬೭. ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ರೇಷ್ಮೆ ಬೆಳೆಗಾರರಿಗೆ ಕೊಡುತ್ತಿರುವ ಬೋನಸ್ ದರ,

ಆ) ಬೋನಸ್ ಪಾವತಿ ಮಾಡುವಲ್ಲಿ ಆರು ತಿಂಗಳ ಕಾಲ ವಿಳಂಬವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೆ ?

ಇ) ಹಾಗಿದ ಲ್ಲಿ ಇದಕ್ಕೆ ಕಾರಣಗಳು ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ಬಿತ್ತನೆಗೆ ಯೋಗ್ಯವಾಗಿದ್ದು ಬೇಡಿಕೆಯಿಲ್ಲದ ಕಾರಣ ನೂಲು ಬಿಚ್ಚಾಣಿಕೆ ಮಾರಾಟವಾದ ಮೈಸೂರು ತಳಿ ಬಿತ್ತನೆ ಗೂಡಿಗೆ ಪ್ರತಿ ಕೆ.ಜಿ.ಗೆ ರೂ. ೧೫-೦೦ರಂತೆ ಬೋನಸ್ ಹಣ ನೀಡಲಾಗುತ್ತಿದೆ.

ಆ) ಹೌದು ಸುಮಾರು ೩ ತಿಂಗಳ ಕಾಲ ವಿಳಂಬವಾಗಿದೆ.

ಇ) ಆರ್ಥಿಕ ಮಿತವ್ಯಯ.

ಅಧ್ಯಕ್ಷರು,—ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಗೈರು ಹಾಜರಾಗಿರುವ ವಿರೋಧಪಕ್ಷದವರು ಆಗಮಿಸಿ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಮನವಿ

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನನ್ನ ಕಳಕಳಿಯ ಪ್ರಾರ್ಥನೆ. ವಿರೋಧ ಪಕ್ಷದ ಸನ್ಮಾನ್ಯ ಸದಸ್ಯರು ಯಾರೂ ಇವತ್ತು ಇಲ್ಲಿ ಬಂದಂತೆ ಕಾಣುವುದಿಲ್ಲ. ಬಹುಶಃ ನಿನ್ನೆ ದಿವಸ ಇಲ್ಲಿ ನಡೆದಂತಹ ಪ್ರಸಂಗ ತಮ್ಮ ಗಮನಕ್ಕೂ ಬಂದಿರಬಹುದು. ಆದರೆ ತಾವು ಅವರನ್ನು ಕರೆಸಿ, ಅವರ ಮನವೊಲಿಸಿ ನಿನ್ನೆ ಏನು ನಡೆಯಿತು, ಅದನ್ನು ಮರೆತು ಬರುವಂಥ ಅವರಿಗೆ ತಿಳಿಸಿ. ಆದರೂ ಕೂಡ ಈಗಾಗಲೇ ಅದನ್ನು ಅರಿತುಕೊಂಡಿದ್ದಾರೆ. ಯಾವುದೋ ಆವೇಶ ಭರದಲ್ಲಿ ಏನೋ ಒಂದು ಕಾರಣದಿಂದ ನಡೆದಿರಬಹುದು. ತಾವು ಅಧ್ಯಕ್ಷರಿದ್ದೀರಿ. ತಾವು ಅವರನ್ನು ಕರೆಸಿ, ಮಾತನಾಡಿ, ಸಭೆಗೆ ಬರುವಂತೆ ಮಾಡಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧಪಕ್ಷದವರ ಪಾತ್ರ ಅಷ್ಟೇ ಮಹತ್ವವಾಗಿದೆ. ಅದನ್ನು ಅವರೂ ತಿಳಿದುಕೊಂಡಿದ್ದಾರೆ. ಆದರೂ ಆ ದಿಸೆಯಲ್ಲಿ ಅವರನ್ನು ಮತ್ತೊಮ್ಮೆ ಕರೆಸಿ ಈ ಸಭೆಗೆ ಬರುಮತೆ ಮಾಡುವುದರಿಂದ ಬೇಡಿಕೆಗಳ ಮೇಲೆ ಇವತ್ತು ನಾವು ಏನು ಪ್ರಸ್ತಾಪ ಮಾಡುತ್ತಿದ್ದೇವೆ ಅದಕ್ಕೆ ಒಂದು ಕಳೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ —ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಇದುವರೆವಿಗೂ ವಿರೋಧ ಪಕ್ಷದವರನ್ನು ಒಟ್ಟಿಗೇ ಇಟ್ಟುಕೊಂಡು ಕೆಲಸ ಮಾಡಿಕೊಂಡು ಬಂದಿದ್ದೇವೆ. ನಿನ್ನೆ ಆಕಸ್ಮಾತ್ ನಡೆದಂತಹ ಸಣ್ಣ ವಿಷಯವನ್ನೇ ಅವರು ಬಹಳವಾಗಿ ಮನಸ್ಸಿಗೆ ಹಚ್ಚಿಕೊಂಡು ಹೊರಗಡೆ ಕುಳಿತು ಬಿಟ್ಟಿದ್ದಾರೆ. ಅವರು ಇಲ್ಲಿರಬೇಕು; ಇಲ್ಲಿದ್ದರೆ ಒಳ್ಳೆಯದು. ಆದ್ದರಿಂದ ತಾವು ಅವರನ್ನು ಕರೆದು ಒಂದು ಮಾತನ್ನು ಹೇಳಿದರೆ ನಿಮ್ಮ ಮಾತನ್ನು ಅವರು ಹೇಳುತ್ತಾರೆ, Let us go together and have a fair exchange of views. ಆದ್ದರಿಂದ ದಯವಮಾಡಿ ಅವರನ್ನು ನಿಮ್ಮ ಛೇಂಬರ್ಸ್‌ಗೆ ಬರುವುದಕ್ಕೆ ಹೇಳಿಕಳುಹಿಸಿ ಮಾತನಾಡಿ ಅವರು ಸದನದ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳುವಂತಕ್ಕಂಥ ಒಂದು ಪ್ರಯತ್ನವನ್ನು ತಾವು ಅವಕಾಶ ಮಾಡಬೇಕೆಂದು ನಾನಂ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಸಂಜೆ ಈ ಒಂದು ಘಟನೆ ನಡೆದಾಗ ತಾವೂ ಇರಲಿಲ್ಲ; ನಾನೂ ಇರಲಿಲ್ಲ. ಈಗ ಬಹಳ ಸೀಮಿತವಾಗಿರತಕ್ಕಂಥ ಬಹಳ ಸರಳವಾದಂಥ ಪ್ರಶ್ನೆ ಏನೆಂದರೆ, ಸನ್ಮಾನ್ಯ ವಿರೋಧಪಕ್ಷದ ಸದಸ್ಯರಿಗೆ ಅವಕಾಶ ಹೆಚ್ಚು ಕೊಡಬೇಕು ಎನ್ನುವುದು, ಅಥವಾ ಅವಕಾಶ ಹೆಚ್ಚು ಕೊಡಬೇಕು ಎನ್ನುವುದಕ್ಕಿಂತಲೂ ಅವಕಾಶ ಸರಿಯಾಗಿ ಸಿಕ್ಕಲಿಲ್ಲ ಎನ್ನುವ ವಾದದಲ್ಲಿ ಬಹುಶಃ ಅವರು ಸ್ವಲ್ಪ ಭಾವೋದ್ರೇಕದಿಂದ ವಾಕೌಟ್ ಮಾಡಿದ್ದಾರೆ. ನಮ್ಮ ಮಟ್ಟಿಗೆ ಹೇಳುವುದಾದರೆ, ತಾವು ಬಹುಶಃ ರೆಕಾರ್ಡ್ಸ್‌ನ್ನು ತರಿಸಿ ನೋಡಬಹುದು. ಯಾವಾಗಲೂ ಕೂಡ principle of democracy is or the principle governing the debate is that the opposition should have their say. The question now is, we have not come in the way of giving more accomodation to the opposition parties. ಆದಕ್ಕೆ ಯಾವುದೇ ಒಂದು ಸಂದರ್ಭದಲ್ಲಿ ನಾವು ಆತಂಕ ಮಾಡಿಲ್ಲ. ಏಕೆಂದರೆ, ಅನೇಕ ಸಂದರ್ಭಗಳಲ್ಲಿ ನಾವು ಸಂಖ್ಯೆಯ ಪ್ರಕಾರ ಕೂಡ ಹೋಗಲೇ ಇಲ್ಲ. ತಮಗೇ ತಿಳಿದಿರುವ ಹಾಗೆ. ಹಿಂದಿನ ವರ್ಷಗಳಲ್ಲಿ ಬೇಡಿಕೆಗಳ ಮೇಲಿನ ಚರ್ಚೆಗೆ ೧೮ ಅಥವಾ ೨೦ ದಿವಸಗಳಿಗಿಂತ ಹೆಚ್ಚು ಅವಕಾಶ ಸಿಕ್ಕಿದ್ದಿಲ್ಲ. ನಮ್ಮ ರಾಜ್ಯದಲ್ಲಿ ಬೇಡಿಕೆಗಳ ಮೇಲಿನ ಚರ್ಚೆಗೆ ಹೆಚ್ಚು ಕಾಲಾವಕಾಶ ಸಿಕ್ಕಿದ್ದಿಲ್ಲ. ಬಹಳೆ ಹಿಂದೆ ಇದ್ದಿರಬಹುದಾದರೂ ಇತ್ತೀಚಿನ ೬-೭ ವರ್ಷಗಳಲ್ಲಿ ಹೆಚ್ಚಿನ ಅವಕಾಶ ಇಲ್ಲವೇ ಇಲ್ಲ. ಆದರೆ ಈ ವರ್ಷ ಬೇಡಿಕೆ ಮೇಲಿನ ಚರ್ಚೆ ಮತ್ತು ಆಯವ್ಯಯದ ಮೇಲಿನ ಚರ್ಚೆ ಎರಡನ್ನೂ ಸೇರಿಸಿದರೆ ೪೦ ದಿವಸಗಳ ಕಾಲ ನಾವು ಚರ್ಚೆ ಮಾಡಿದ್ದೇವೆ. ಮತ್ತೆ ಈಗ ೧೪ನೇ ತಾರೀಖಿನವರೆಗೆ ಕೂಡಾ ಕುಳಿತುಕೊಳ್ಳು